ತನಗೂ ಬರುತ್ತದೆಂದು ತಪಿಸುವ ಸೊಸೆಯಂತೆ, ಕಾಯುತ್ತದೆ. ಮೊರೆ ಹೊಕ್ಕವರನ್ನು ರಕ್ಷಿಸುತ್ತದೆ. ಸೆರೆಮನೆಯಲ್ಲಿದ್ದ ವಸುದೇವ–ದೇವಕಿಯರಿಗೆ ಗಂಡುಮಗು ಹುಟ್ಟಿದರೆ ಕೂಗಿ ಸಂದೇಶ ಕೊಡಲು ಕಂಸ, ಕತ್ತೆಯನ್ನು ನೇಮಿಸಿದ್ದ ಪ್ರಸಂಗವನ್ನೇ ತೆಗೆದುಕೊಳ್ಳಿರಿ. ದೇವಕಿ ಪ್ರಸವಿಸಿದ ಕೂಡಲೇ ವಸುದೇವ ದೀನನಾಗಿ ಕತ್ತೆಯ ಕಾಲು ಹಿಡಿದನು. ಹಾಗೆ ಹಿಡಿಯದಿದ್ದರೂ ಕರುಣಾಳು ಕತ್ತೆ ಶಿಶುಹತ್ಯೆಗೆ ಪ್ರಚೋದನೆ ಕೊಡುತ್ತಿರಲಿಲ್ಲ. ಈ ಗಧಾ ಶರಣಾಗತಿ ಕಾರ್ಯ ಪುರಾಣ ಕಾಲಕ್ಕೆ ಮುಗಿಯಲಿಲ್ಲ. ನಾನೊಂದು ದಿನ ಮಧ್ಯಾಹ್ನ ಮನೆಯಲ್ಲಿ ವಿರಮಿಸುತ್ತಿರುವಾಗ, ಬೀದಿಯಲ್ಲಿ 'ಏನ್ರಮ್ಮಾ ಕತ್ತೆಹಾಲು' ಎಂಬ ಅಶರೀರವಾಣಿ ಕೇಳಿಸಿತು. ಹೀಗೂ ಉಂಟೇ ಎಂದು ಗಡಬಡಿಸಿ ಹೊರಬಂದೆ. ಒಬ್ಬ ಹೆಂಗತ್ತೆಯನ್ನು ಹಿಡಿದುಕೊಂಡು ಮನೆಯ ಮುಂದೆ ನಿಂತಿದ್ದ. ಹಸುವಿನ ಹಾಲನ್ನು ಕೊಟ್ಟು ಮೋಸ ಮಾಡುವ ಆಪಾದನೆಯಿಂದ ಪಾರಾಗಲು, ಆತ ಕರೆವ ಕಾಮಧೇನುವನ್ನು ಗಿರಾಕಿಗಳ ಮುಂದೆಯೇ ನಿಲ್ಲಿಸಿ ಸೊರೆಬಿಡಿಸಿ ಕೊಡುತ್ತಿದ್ದ. ನಾನು ಕೇಳಿದೆ:

"ಏನಪ್ಪಾ, ಕತ್ತೆಹಾಲಿಂದ ಏನು ಪ್ರಯೋಜನ?"

"ಇದೇನು ಸ್ವಾಮಿ ಹಿಂಗೆ ಕೇಳತೀರಿ? ಮಾತು ಬಾರದ ಕೂಸುಗಳಿಗೆ ಕುಡಿಸಿದರೆ, ಗಿಳೀ ಹಂಗೆ ಮಾತಾಡ್ತವೆ. ಕಾಲುಬಿದ್ದು ಹೋದ ಮಕ್ಕಳು ಎದ್ದು ಜಿಂಕೆ ಪರಿ ಓಡಾಡ್ತವೆ."

ಬೀದಿಯಲ್ಲಿ ಏನು ಬಂದರೂ ವಿಚಾರಣೆ ನಡೆಸುವ ಪ್ರವೃತ್ತಿಯುಳ್ಳ ಶ್ರೀಮತಿ ಬಾನು ಅಡ್ಡಬಾಯಿ ಹಾಕಿ ಕೇಳಿದರು: "ಒಂದು ಲೀಟರಿಗೆ ಎಷ್ಟಪ್ಪಾ?" ಮುಖದಲ್ಲಿ ವ್ಯಂಗ್ಯನಗೆ ಸೂಸುತ್ತ ಆತ ಹೇಳಿದ:

"ಒಳಲೆಗೆ ನೂರು ರೂಪಾಯಿ."

"ಇಷ್ಟೊಂದು ತುಟ್ಟೀನಾ?"

"ಅಮ್ಮಾ! ಇದು ಬೇಕೆಂದಾಗ ಸಿಗುವ ವಸ್ತುವಲ್ಲ. ಜೀವಾಮೃತ!"

'ಲೋಕದಲ್ಲಿ ಇಂಥ ದಡ್ಡರೂ ಇದ್ದಾರಾ?' ಎಂಬಂತೆ ಬಾನುವತ್ತಲೂ, ಅವರ ದಡ್ಡತನದ ಮೂಲ ನಾನೇ ಎಂಬಂತೆ ನನ್ನತ್ತಲೂ, ಕತ್ತೆ ಬಿರಿಗಂಗಳಿಂದ ವಾರೆನೋಟ ಬೀರಿತು. ಅರರೇ! ಆಕಳಹಾಲಿನ ಮುಂದೆ ಎಮ್ಮೆ ಹಾಲನ್ನೂ ಅಲ್ಲಗಳೆದ ಗಾಂಧಿಯವರ ನಾಡಲ್ಲಿ, ಧೇನುಕಶಾಸ್ತ್ರ ಬಿಟ್ಟು ಅಶ್ವಶಾಸ್ತ್ರ, ಗಜಶಾಸ್ತ್ರ ಬರೆದ ಬೀಡಲ್ಲಿ, ಗಾರ್ದಭಕ್ಷೀರ ಅಮೃತವಾದದ್ದು ಎಂದಿನಿಂದ? ತನ್ನನ್ನು ಹೀಗಳೆವ ಮಾನವರಿಗೆ ಬುದ್ಧಿಗಲಿಸಲೆಂದೇ ಪ್ರಾಣಿ ಹೂಡಿದ ಹೂಟವಿದೇನು? 'ಕತ್ತೆಯ ಮೊಲೆಯಲ್ಲಿ ಖಂಡುಗ ಹಾಲಿದ್ದರೇನು' ಎಂಬ ಗಾದೆ ಕಟ್ಟಿದ ಮಹಾನುಭಾವ ಯಾವ ಸಮಾಧಿಯಲ್ಲಿ ಮಲಗಿದ್ದಾನೊ? ಪರಿತಾಪದಿಂದ ಹೊರಳಾಡಲಿ. ನನಗಂತೂ ಕತ್ತೆಹಾಲಿಗೆ ಸಿಕ್ಕಿರುವ ವೈದ್ಯಕೀಯ ಮಹತ್ವ ಕಂಡು ಖುಷಿಯಾಯಿತು. ಇದಕ್ಕೆ ಕಾರಣವುಂಟು. ಬಾಲ್ಯದಲ್ಲಿ ಕತ್ತೆಹಾಲು ಕುಡಿಯಲಿಲ್ಲ ಬಿಟ್ಟರೆ, ಅವುಗಳ ಜತೆಗೆ ಒಡನಾಡಿದ ಅಮೂಲ್ಯ ಅನುಭವವನ್ನು, ಗುಪ್ತನಿಧಿಯಂತೆ ಕಾಪಿಟ್ಟುಕೊಂಡಿದ್ದೆ. ಅದನ್ನೀಗ ಹೊರತೆಗೆದು ಹೆಮ್ಮೆಯಿಂದ ಲೋಕದೆದುರು ಮಂಡಿಸಬಹುದು ಎಂಬ ಹಿಮ್ಮತ್ತು ಬಂತು. ಇದರ ತಪಶೀಲು ಹೀಗಿದೆ:

ನಮ್ಮೂರ ಪಕ್ಕದ ಕಾಡಿನಲ್ಲಿ ಕತ್ತೆಕಣಿವೆ ಎಂಬ ದುರ್ಗಮ ಜಾಗವಿದೆಯಷ್ಟೆ. ಅಲ್ಲಿಗೆ ನಾವು ರವಿವಾರ ಗಾಡಿ ಕಟ್ಟಿಕೊಂಡು ಸೌದೆ ತರಲು ಹೋಗುತ್ತಿದ್ದೆವು. ಹಾದಿಯಲ್ಲಿ ನಮ್ಮನ್ನು ಕೂಡಿಕೊಳ್ಳುತ್ತಿದ್ದ ಕತ್ತೆಯವರಿಗೆ ಕಾಡಿಬೇಡಿ ನಾನು ಸವಾರಿಸುತ್ತ ಕಣಿವೆಯನ್ನು ಮುಟ್ಟುತ್ತಿದ್ದೆ. ಮರಳಿ ಮನೆಗೆ ಬಂದ ಬಳಿಕ ಕತ್ತೆಯವರು ಅವುಗಳ ಮುಂಗಾಲು ಕಟ್ಟಿ ಮೇಯಲು ಬಿಡುತ್ತಿದ್ದರು. ನಾವು ಕಾಲಬೇಡಿ ಬಿಚ್ಚಿ ಸ್ವಾತಂತ್ರ್ಯ ಕೊಡುತ್ತಿದ್ದೆವು. ಅವು ಉಪಕಾರ ಸ್ಮೃತಿಯಿಂದ ಕಣ್ಸನ್ನೆ ಮಾಡಲು, ಬೆನ್ನಮೇಲೇರಿ ಮನಸಾರೆ ಸವಾರಿ ಮಾಡುತ್ತಿದ್ದೆವು. ತಮಗೆ ಸಾಕಾದಾಗ ನೆಗೆದಾಡಿ ನಮ್ಮನ್ನು ಕೆಡಹುತ್ತಿದ್ದವು. ಬಿದ್ದರೂ ಬಹಳ ಪೆಟ್ಟಾಗುತ್ತಿರಲಿಲ್ಲ. ತರಚುಗಾಯ. ಅಶ್ವಗಳ ಜತೆ